**ಪ್ರಧಾನ ಸಿವಿಲ್  ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**ಕ್ರಿಮಿನಲ್  ಮೊಕದ್ದಮೆ ಸಂಖ್ಯೆ:  2500/2025**

ಪಿರ್ಯಾದುದಾರರು :          ವಿರುದ್ಧ          ಆರೋಪಿತರು:

| | |
|---|---|
| ಬಸವಾಪಟ್ಟಣ  ಪೊಲೀಸ್ ಠಾಣೆ | ಎ1. ಹರೀಶ ಆರ್ ಯಾನೆ ಲೂಲಿ  ಬಿನ್ ರಮೇಶ ನಾಯ್ಕ, ವಯಸ್ಸು:  21 ವರ್ಷ, |
| | ಎ2.  ರವಿಕುಮಾರ್  ಬಿನ್ ರವಿನಾಯ್ಕ ವಯಸ್ಸು: 47 ವರ್ಷ, |
| | ಎ3. ಹರೀಶ ಆರ್ ಯಾನೆ ಪುಟ್ಟ  ಬಿನ್ ರೇವಣಿ ನಾಯ್ಕ, ವಯಸ್ಸು:  31 ವರ್ಷ, |
| | ಎಲ್ಲರ ವಾಸಃ ವಾಸಃ  ಕಾರಿಗನೂರು ಗ್ರಾಮ, ಚನ್ನಗಿರಿ ತಾಲ್ಲೂಕು. |

**ದೋಷಾರೋಪಣೆ**

ನಾನು  **ಮಹಾಲಕ್ಷ್ಮೀ ಜಿ** ಪ್ರಧಾನ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ದಿನಾಂಕಃ- 19.05.2025 ರಂದು ರಾತ್ರಿ ಸುಮಾರು 10.00 ಗಂಟೆ ಸಮಯದಲ್ಲಿ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಚನ್ನಗಿರಿ ತಾಲ್ಲೂಕು ಬಸವಾಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯ ಕಾರಿಗನೂರು ಗ್ರಾಮದ ಚಾಸಾ 1 ರವರ ಮನೆಯ ಬಳಿ ಹೋಗಿ 2 ಮತ್ತು 3 ನೇ ಆರೋಪಿಗಳಾದ ನೀವುಗಳು 1ನೇ ಆರೋಪಿಗೆ ಮನೆ ಒಳಗೆ ಹೋಗಿ ಕಳ್ಳತನ ಮಾಡುವಂತೆ ದುಷ್ಪ್ರೇರಣೆ ನೀಡುವ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ. 54 ಸಹ ವಾಚಕ ಕಲಂ.3(5) ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

2. ಈ ಮೇಲೆ ಹೇಳಿದ ಸ್ಥಳ, ಸಮಯ ದಿನಾಂಕದಂದು  ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಚಾಸಾ 1 ರವರ ಮನೆಯ ಮುಂಭಾಗದಲ್ಲಿದ್ದ ಏಣಿ ಮುಖಾಂತರ 1ನೇ ಆರೋಪಿಯನ್ನು ಮೇಲ್ಛಾವಣಿಗೆ ಹತ್ತಿಸಿ 2 ಮತ್ತು 3 ನೇ ಆರೋಪಿಗಳಾದ ನೀವುಗಳು ಯಾರದರೂ ಬಂದರೆ ಸೂಚನೆ ಕೊಡುವುದ್ದಕ್ಕಾಗಿ ಮನೆಯ ಮುಂದೆ ನಿಂತಿದ್ದು ಮೇಲ್ಛಾವಣಿ ಹತ್ತಿದ 1ನೇ ಆರೋಪಿಯು ಮನೆಯ ಮೇಲಿನ 2 ಹಂಚುಗಳನ್ನು ತೆಗೆದು ಮನೆಒಳಗೆ ಅಕ್ರಮ ಒಳಗೆ  ಪ್ರವೇಶ ಮಾಡುವುದರ ಮೂಲಕ,

ಭಾರತೀಯ ನ್ಯಾಯ ಸಂಹಿತೆ ಕಲಂ. 331(4) ಸಹ ವಾಚಕ ಕಲಂ.3(5) ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

3. ಮೇಲೆ ತಿಳಿಸಿದ ಸ್ಥಳ ಸಮಯ ದಿನಾಂಕದಂದು ಸಮಾನ ಉದ್ದೇಶದಿಂದ ಆರೋಪಿಗಳಾದ ನೀವುಗಳು ಚಾಸಾ 1 ರವರ ನಡುಮನೆಯಲ್ಲಿದ್ದ ಗಾಡ್ರೇಜ್ ಬೀರುವಿನಲ್ಲಿಟ್ಟಿದ್ದ 70 ಗ್ರಾಂ ತೂದ ಒಂದು ಜೊತೆ ಬೆಳ್ಳಿಯ ಕಾಲು ಚೈನು, 3,100/- ನಗದು ಹಣ, 15 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ನಕಾಲು ಚೈನು ರೂ.660/- ನಗದು ಹಣ, 52 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ಕಾಲು ಚೈನು, ರೂ.2,200 ರೂ ನಗದು, 61 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ಕಾಲು ಚೈನು, ರೂ. 2640/- ನಗದು ಹಣ, 98 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ಕಾಲು ಚೈನು, ರೂ. 4290/- ನಗದು ಹಣ, 36 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ಕಾಲು ಚೈನು, ರೂ. 1580/- ನಗದು ಹಣ, 68 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ಕಾಲು ಚೈನು, ರೂ. 2970/- ನಗದು ಹಣ, 16 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ಚಿಕ್ಕ ಕಾಲು ಬಳೆಗಳು ಬೆಲೆ ರೂ.700/-, 16 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ದೊಡ್ಡ ಕಾಲು ಬಳೆಗಳು ಬೆಲೆ ರೂ.700/-, 2.5 ಗ್ರಾಂ ತೂದ ಬೆಳ್ಳಿ ಗೆಜ್ಜೆಗಳು ಬೆಲೆ ರೂ.100/-, 0.630 ಗ್ರಾಂ ತೂಕದ ಒಂದು ಜೊತೆ ಬಂಗಾರದ ಕಿವಿ ಮುರ ಬೆಲೆ ರೂ. 4300/-, 0.320 ಗ್ರಾಂ ತೂಕದ 2 ಮೂಗು ಬಟ್ಟುಗಳು ಬೆಲೆ ರೂ. 1150/-, 0.190 ಗ್ರಾಂ ತೂಕದ ಬಂಗಾರದ ಜುಮುಕಿ ಗೆಜ್ಜೆ ಬೆಲೆ 1270/- ಎರಡು ಜೊತೆ ಆರ್ಟಿಫಿಸಿಯಲ್ ಕಿವಿ ಓಲೆ, ಒಂದು ಆರ್ಟಿಫಿಸಿಯಲ್ ಲಕ್ಷ್ಮೀ ಡಾಲರ್, ಚಿಕ್ಕದಾಗಿ ಕಾಣುವ ವಾಚ್ಪಿನ್ ಹಾಗೂ ರೂ.8,000/- ನಗದು ಹಣವನ್ನು ಕಳ್ಳತನ ಮಾಡುವುದರ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ. 305 ಸಹ ವಾಚಕ ಕಲಂ.3(5) ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ.

ದಿನಾಂಕ: 13.01.2026

**(ಶ್ರೀಮತಿ ಮಹಾಲಕ್ಷ್ಮೀ. ಜಿ)**
**C/c ಪ್ರಧಾನ ಸಿವಿಲ್ ದಂಡಾಧಿಕಾರಿ,**

**ಚನ್ನಗಿರಿ.**